ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ–೫೮೪೧೩೩, ರಾಯಚೂರು, ಕರ್ನಾಟಕ ರಾಜ್ಯ, ಭಾರತ
Office No.+91 9141030953 ಪರೀಕ್ಷಾ ವಿಭಾಗ E-mail: registrarevrur@gmail.com

ಕ್ರ.ಸಂ.ರಾವಿರಾ/ಪರೀಕ್ಷೆ/**UG-II&IV&VI/**2024–25/475 ದಿನಾಂಕ:13.08.2024

<u>ಸುತ್ತೋಲೆ</u>

**ನೋಡಲ್ ಅಧಿಕಾರಿಗಳಿಗೆ ವಿಶೇಷ ಸೂಚನೆಗಳು:**

1. ಪರೀಕ್ಷೆಗಳು ಮೂರು ಸೆಷನ್‌ಗಳಲ್ಲಿ ಇರುವುದರಿಂದ ಪ್ರಶ್ನೆಪತ್ರಿಕೆಗಳನ್ನು ಆಯಾ ಪರೀಕ್ಷಾ ಕೇಂದ್ರದ ಪ್ರಾಂಶುಪಾಲರು ದೃಢೀಕರಿಸಿದ ಸಿಬ್ಬಂದಿಗೆ ಕಾಲೇಜಿನ ಮೋಹರು ಮತ್ತು ಸಹಿ ಮೂಲಕ **ಬೆಳಿಗ್ಗೆ 8.00ಕ್ಕೆ ಎಲ್ಲಾ ಸೆಮಿಸ್ಟರ್‌ನ** ಪ್ರಶ್ನೆಪತ್ರಿಕೆಗಳನ್ನು ವಿತರಿಸತಕ್ಕದ್ದು.
2. ತಮ್ಮ ಕೇಂದ್ರಕ್ಕೆ ಜೋಡಣೆಗೊಂಡ ಪರೀಕ್ಷಾ ಕೇಂದ್ರಗಳಿಂದ ಪರೀಕ್ಷೆ ಆದನಂತರ ಉತ್ತರ ಪತ್ರಿಕೆಗಳನ್ನು **ಸಾಯಂಕಾಲ 6.00 ಕ್ಕೆ ಎಲ್ಲಾ ಸೆಮಿಸ್ಟರ್‌ನ ಉತ್ತರ ಪತ್ರಿಕೆಗಳನ್ನು** ಬಂಡಲ್‌ಗಳನ್ನು ತಲುಪಿಸುವಂತೆ ಪರೀಕ್ಷಾ ಕೇಂದ್ರಗಳ ಸಿಬ್ಬಂದಿಗಳಿಗೆ ಸೂಚಿಸುವುದು.
3. ಪ್ರತಿ ಪರೀಕ್ಷಾ ಕೇಂದ್ರವು ಆಯಾ ದಿನ ನಡೆಯುವ ಎಲ್ಲಾ ಪ್ರಶ್ನೆಪತ್ರಿಕೆಗಳನ್ನು (ಹೆಚ್ಚುವರಿಯಾಗಿ ಪ್ರತ್ಯೇಕ) ಪ್ಯಾಕ್ ಮಾಡಿ ನೀಡಲಾಗಿದೆ. ಅವಶ್ಯಕತೆ ಇದ್ದರೆ ಮಾತ್ರ ಪ್ರಶ್ನೆಪತ್ರಿಕೆ ಓಪನ್ ಮಾಡಿ ವಿದ್ಯಾರ್ಥಿಗಳಿಗೆ ವಿತರಿಸತಕ್ಕದ್ದು ಎಂದು ಈ ಮೂಲಕ ಸೂಚಿಸಲಾಗಿದೆ.
4. ಈ ಬಾರಿ ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ಕೇಂದ್ರ ವೈಜ್ ಪ್ಯಾಕಿಂಗ್ ಆಗಿರುವುದರಿಂದ ಪರೀಕ್ಷಾ ಕೇಂದ್ರದ ಪ್ರಶ್ನೆಪತ್ರಿಕೆಗಳ ಬಂಡಲ್‌ಗಳ ಜೊತೆ ಟ್ಯಾಗ್ ಆಗಿರುವ ಕಾಲೇಜುಗಳ ಪ್ರಶ್ನೆಪತ್ರಿಕೆಗಳು ಸೇರಿರುತ್ತವೆ.
5. **ದ್ವಿತೀಯ ಸೆಮಿಸ್ಟರನ ಪ್ರಶ್ನೆಪತ್ರಿಕೆಗಳ ಬಾಕ್ಸ್‌ಗಳ ಮೇಲೆ ಬಿಳಿ ಲೇಬಲ್ ಮತ್ತು ನಾಲ್ಕನೇ ಸೆಮಿಸ್ಟರ್‌ನ ಬಾಕ್ಸ್‌ಗಳ ಮೇಲೆ ಹಸಿರು ಲೇಬಲ್ ಹಾಗೂ ಆರನೇ ಸೆಮಿಸ್ಟರ್‌ನ ಪ್ರಶ್ನೆಪತ್ರಿಕೆಗಳ ಬಾಕ್ಸ್‌ಗಳ ಮೇಲೆ ನೀಲಿ ಲೇಬಲ್‌ಗಳನ್ನು ಅಂಟಿಸಲಾಗಿದೆ. ಅದನ್ನು ಪರಿಶೀಲಿಸಿ ವಿತರಿಸಬೇಕು.**
6. ಪರೀಕ್ಷೆ ಮುಗಿದ ನಂತರ ಪರೀಕ್ಷಾ ಕೇಂದ್ರಗಳಿಂದ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಸ್ವೀಕರಿಸಿ ವಿಶ್ವವಿದ್ಯಾಲಯದ ಸಿಬ್ಬಂದಿಗಳು ತಮ್ಮ ಕೇಂದ್ರಕ್ಕೆ ಭೇಟಿ ನೀಡಿದಾಗ ಸ್ವೀಕರಿಸಿದಂತಹ ಉತ್ತರ ಪತ್ರಿಕೆಗಳನ್ನು(Bundles) ಅವರಿಗೆ ಒಪ್ಪಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.
7. ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಯಾವುದೆ ಮಾಹಿತಿಗಾಗಿ ವಿಶ್ವವಿದ್ಯಾಲಯ ನೇಮಿಸಿದ ಸಿಬ್ಬಂದಿಯನ್ನು ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಸಂಪರ್ಕಿಸಬಹುದು ಆದ್ದರಿಂದ ನೋಡಲ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸದಾ ಸಿದ್ಧರಾಗಿರಬೇಕೆಂದು ಈ ಮೂಲಕ ಸೂಚಿಸಲಾಗಿದೆ.
8. ವಿಶ್ವವಿದ್ಯಾಲಯದ ನಿಯಮಾನುಸಾರ ಸಿಬ್ಬಂದಿಗಳಿಗೆ ಪರೀಕ್ಷಾ ಕಾರ್ಯಗಳಿಗೆ ನೀಡುವ ಸಂಭಾವನೆ ಮಂಜೂರಿಸಲಾಗುವುದು.

ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ಕಾರ್ಯಗಳಿಗೆ ಸಿಬ್ಬಂದಿಯನ್ನು ನೇಮಿಸಿ ತಮ್ಮ ಜವಾಬ್ದಾರಿಗಳನ್ನು(KSU Act)2000ರ ಪ್ರಕಾರ ನಿರ್ವಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

REGISTRAR (EVALUATION)
RAICHUR UNIVERSITY, RAICHUR
Registrar (Evaluation)
Raichur University
RAICHUR

ಪ್ರತಿಗಳು:

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು/ಕುಲಸಚಿವರು ಅವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಮಾಹಿತಿಗಾಗಿ.
3. ಕಚೇರಿ ಪ್ರತಿ.